loans on Failed Irrigation Wells

939 SRI ANDANAIAH (Kunigal)—Will the Minister for Revenue be pleased to state.—

(*a*) whether it is a fact that Government have issued an order for remitting the loan sanctioned by the Primary Land Devalopment Banks or Government to the Ryots for digging irrigation wells, if the wells failed to yield water ;

(*b*) if so whether the said order is applicable to the loan obtained by the Ryots from the Government during the year 1961 or earlier under N.E.S. Schemes for digging irrigation wells which failed to yield water

(*c*) if not the reasons for the above discrimination and whether the above facilities would be extended to these cases also ?

SRI B. BASAVALINGAPPA (Minister for Revenue).—

(*a*) There are Government Orders for remitting 50 percent of the loan obtained from the Government and 20 percent to 50 percent of loan obtained from the Land Development Banks.

(*b*) No.

(*c*) This facility has been extended to the loan sanctioned to wells dug after 1st April 1962 only since it was contemplated to extend the facility with retrospective effect. The question of extending the said facility to the loan obtained before 1st April 1962 to the wells which failed to yield water is under consideration of the Government.

ಶ್ರೀ ಆಂದಾನಯ್ಯ.—ನನ್ನ ಪ್ರಶ್ನೆ (ಇ)ಗೆ ಉತ್ತರವಾಗಿ ೧-೪-೬೨ರಿಂದ ಯಾವ ಬಾವಿಯಲ್ಲಿ ನೀರು ಬಂದಿಲ್ಲವೋ ಅಂಥ ಬಾವಿಗಳ ಸಾಲವನ್ನು ಮನ್ನಾ ಮಾಡುತ್ತೇವೆಂದು ಹೇಳಿದ್ದೀರಿ ೧-೪-೧೯೬೨ರ ಹಿಂದೆ ಅನೇಕ ಜನರು ಬಾವಿಗಳನ್ನು ತೆಗೆದಿದ್ದು, ನೀರು ಬಾರದೆ ಇದ್ದು ಅಂಥವರ ಸಾಲವನ್ನು ಸರ್ಕಾರದವರು ಮನ್ನಾ ಮಾಡದೆ, ಸಾಲವನ್ನು ವಸೂಲು ಮಾಡುತ್ತಿದ್ದಾರೆ. ಇವರ ಸಾಲವನ್ನು ಸಹ ಸರ್ಕಾರದವರು ವಜಾ ಮಾಡುವುದಕ್ಕೆ ತಕ್ಕ ಕ್ರಮ ತೆಗೆದುಕೊಳ್ಳುತ್ತೀರಾ ?

† ಶ್ರೀ ಬಿ. ಬಸವಲಿಂಗಪ್ಪ.—ನಾವು ೧೯೬೬ನೇ ಇಸವಿಯಲ್ಲಿ ಮಾಡಿರತಕ್ಕ ಒಂದು ಹುಕುಂ ಏನು ಇದೆ, ಅದು ತಮ್ಮ ಗಮನಕ್ಕೆ ಬಂದಿಲ್ಲವೆಂದು ಕಾಣುತ್ತದೆ, ಆದರಲ್ಲಿ ಇಂಥ ಬಾವಿಗಳ ಸಾಲದ ೫೦ ಭಾಗ ದಷ್ಟು ಹಣವನ್ನು ವಜಾ ಮಾಡಬೇಕು ಎಂದು ಮಾಡಿದ್ದೇವೆ. ಸದರಿ ಸೌಲಭ್ಯವನ್ನು ಮಂಜೂರುಮಾಡ ತಕ್ಕ ಕೆಲಸವನ್ನು ಆಯಾ ಜಿಲ್ಲಾಧಿಕಾರಿಗಳಿಗೆ ಕೊಡಲಾಗಿದೆ, ಯಾರು ಕಷ್ಟದಲ್ಲಿರುತ್ತಾರೆ, ಮತ್ತು ಯಾರಿಗೆ ಈ ಸಾಲವನ್ನು ಮರುಪಾವತಿ ಮಾಡುವುದಕ್ಕೆ ಸಾಧ್ಯವಿಲ್ಲ ಅಂಥವರಿಗೆ ಮಾತ್ರ ಇದು ಅನ್ವಯವಾಗುತ್ತದೆ ಹಾಗೆಯೇ ೧೯೬೨ನೇ ಇಸವಿಯಿಂದ ಯಾರು ಯಾರು ಇಂಥ ಸಾಲಗಳನ್ನು ಪಡೆದಿದ್ದಾರೆ ಮತ್ತು ಯಾವ ಬಾವಿಯಲ್ಲಿ ನೀರು ಬರಲಿಲ್ಲ, ಅಂಥವರಿಗೆ ಇದರ ಒಂದು ಅನುಕೂಲವನ್ನು ಕೊಟ್ಟಿದ್ದೇವೆ. ೧೯೬೨ರಹಿಂದೆ ಈ ಸಾಲ ಕೊಟ್ಟಿದ್ದು, ಅದನ್ನು ವಜಾ ಮಾಡಬೇಕು ಎಂದು ಮಾನ್ಯ ಸದಸ್ಯರು ಏನು ಹೇಳುತ್ತಾರೆ ಅದನ್ನು ನಾವು ಯೋಚನೆ ಮಾಡುತ್ತೇವೆ.

ಶ್ರೀ ಆಂದಾನಯ್ಯ.—ಈ ಸಾಲ ಪಡೆದವರಲ್ಲಿ ಅನೇಕ ಜನರು ಬಡ ರೈತರು ಇವರು ಬಹಳ ಕಷ್ಟಕ್ಕೆ ಈಡಾಗಿದ್ದಾರೆ. ಈ ಗಾಗಲೇ ಸರ್ಕಾರದವರು ಇವರಿಗೆ ಕೊಟ್ಟಿರತಕ್ಕ ಈ ಸಾಲವನ್ನು ವಸೂಲು ಮಾಡು ತ್ತಿದ್ದಾರೆ, ಇದನ್ನು ಆದಷ್ಟು ಬೇಗ ತಾವು ಪರಿಶೀಲನೆ ಮಾಡಿಸಿ ಸೂಕ್ತ ಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಬಿ. ಬಸವಲಿಂಗಪ್ಪ.—ಸರ್ಕಾರದ ಹುಕುಂಪ್ರಕಾರ ಕೆಲವರು ಸಣ್ಣವರು ದೊಡ್ಡವರು ಎನ್ನುವುದು ಇಲ್ಲ. ಯಾರು ಬಾವಿ ಸಾಲವನ್ನು ತೆಗೆದುಕೊಂಡಿದ್ದಾರೆ ಮತ್ತು ಯಾರು ಇದರಲ್ಲಿ ಸಾಲ ಮರು ಪಾವತಿ ಮಾಡುವುದಕ್ಕೆ ಅಶಕ್ತರಾಗಿದ್ದಾರೆ, ಅವರೆಲ್ಲರಿಗೂ ಇದು ಅನ್ವಯವಾಗುತ್ತದೆ.

ಶ್ರೀ ಜಿ. ಬಿ. ಶಂಕರ್‌ರಾವ್.—ಮಾನ್ಯ ಮಂತ್ರಿಗಳು, ವಿಫಲ ಗೊಂಡಂತಹ ಬಾವಿಗಳ ಸಾಲವನ್ನು ಮನ್ನಾಮಾಡತಕ್ಕ ಕ್ರಮ ಇದೆ ಎನ್ನುವ ಮಾತನು ಹೇಳಿದ್ದಾರೆ. ಆದರೆ ಟೆಕ್ನಿಕಲ್ ಡಿಪಾರ್ಟ್‌ಮೆಂಟಿನವರು ಇವುಗಳನ್ನು ಸೂಪರ್‌ವೈಸ್ ಮಾಡಿದಮೇಲೆ ಮತ್ತು ಅವರು ಇದರ ಬಗ್ಗೆ ವರದಿಯನ್ನು ಕೊಟ್ಟಮೇಲು ಸಹ ಈ ಸೌಲಭ್ಯ ರೈತರಿಗೆ ಸಿಕ್ಕಿಲ್ಲ. ಇದರಲ್ಲಿ ತಾವು ಅನುಸರಿಸತಕ್ಕ ಕ್ರಮ ಸರಿಯಾಗಿದೆಯೇ? ವಿಫಲ ಗೊಂಡಂಥ ಬಾವಿಯಲ್ಲಿ ನೀರು ಬರುವುದಿಲ್ಲ. ಆದರೆ ಮೂರು ನಾಲ್ಕು ವರ್ಷಗಳಾದ ಮೇಲೆ ತಮ್ಮ ಅಸಿಸ್ಟೆಂಟ್ ಕಮಿಷನರ್ ಆವರು ಅಲ್ಲಿ ಹೋಗಿ ಇನ್‌ಸ್ಪೆಕ್ಟ್ ಮಾಡಿಕೊಂಡು ಬಂದು ಹೇಳುವಂಥಾದ್ದು ಸರಿಯಾಗಿ ಆಗುತ್ತಲ್ಲ. ಈ ಕ್ರಮದಲ್ಲಿ ತಪ್ಪಿದೆ. ಇದನ್ನು ಸರಿಪಡಿಸಿಕೊಂಡು ಟೆಕ್ನಿಕಲ್ ಡಿಪಾರ್ಟ್‌ಮೆಂಟಿನವರ ಅಭಿಪ್ರಾಯವನ್ನು ತೆಗೆದುಕೊಂಡು ರೈತರಿಗೆ ಸಿಕ್ಕಬೇಕಾದ ಸೌಲಭ್ಯಗಳನ್ನು ಒದಗಿಸುವುದಕ್ಕೆ ತಾವು ಸಿದ್ಧರಿದ್ದೀರಾ ?

ಶ್ರೀ ಬಿ. ಬಸವಲಿಂಗಪ್ಪ.—ಈ ವಿಫಲಗೊಂಡಂಥ ಬಾವಿಗಳ ಬಗ್ಗೆಯೇ ಸರ್ಕಾರದವರು ಹುಕುಂ ಮಾಡಿದ್ದಾರೆ. ಅಧಿಕಾರಿಗಳು ಈದಿಸೆಯಲ್ಲಿ ಸರಿಯಾದ ಕ್ರಮ ತೆಗೆದುಕೊಳ್ಳದೆ, ಇದ್ದ ಪ್ರಸಂಗಗಳಲ್ಲಿ ನಾವು ಏನು ಕ್ರಮತೆಗೆದು ಕೊಳ್ಳಬೇಕೋ ಅದನ್ನು ತೆಗೆದುಕೊಳ್ಳುತ್ತೇವೆ. ಮತ್ತು ಮಾನ್ಯ ಸದಸ್ಯರು ಇದು ಬಹಳ ವಿಳಂಬವಾಗುತ್ತದೆ ಎನ್ನುವ ಮಾತನ್ನು ಹೇಳಿದ್ದಾರೆ. ಇದಕ್ಕೆ ನಾವುಸೂಕ್ತ ಸೂಚನೆಗಳನ್ನು ಕೊಟ್ಟು ಹಾಗೆ ವಿಳಂಬವಾಗದ ಹಾಗೆ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ವಿ. ಮುನಿಯಪ್ಪ.—ಸರ್ಕಾರದವರ ಉದ್ದೇಶ ಬಹಳ ಸಾಧುವಾಗಿದ್ದರೂ ಕೂಡ ಇದರ ಫಲ, ಇಲ್ಲಿಯವರಿಗೆ ಸುಮಾರು ಐದೆಂಡುಪರ್ಸೆಂಟ್ ರೈತರಿಗೂ ಸಹ ಸೇರಿಲ್ಲ. ಬಹುಕಾಲದಿಂದ ರೆಕಾರ್ಡ್ಸ್‌ಗಳ ಕರೆಸ್ಪಾಂಡೆನ್ಸ್‌ನಲ್ಲಿ ಇದುನಡೆದುಕೊಂಡು ಬರುತ್ತಿದೆ. ಆದಕ್ಕೋಸ್ಕರ ತಾವು ಇದನ್ನು ಆದಷ್ಟು ಬೆ ಗ ಇತ್ಯರ್ಥ ಮಾಡತಕ್ಕಂಥ ವ್ಯವಸ್ಥೆಯನ್ನು ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಾ ? ಈತಿಂಗಳ ಕೊನೆಯಲ್ಲಿ ಜಿಲ್ಲಾಧಿಕಾರಿಗಳ ಕಾನ್‌ಫರೆನ್ಸ್ ಕರೆದಿದ್ದೀರಿ ಎಂದು ನಾನು ಪತ್ರಿಕೆಯಲ್ಲಿ ಕೇಳಿದ್ದೇನೆ ಈ ಸಮಯದಲ್ಲಿ ತಾವು ಜಿಲ್ಲಾಧಿಕಾರಿಗಳಿಗೆ ಸೂಕ್ತ ನಿರ್ದೇಶನ ಕೊಟ್ಟು ಇದಕ್ಕೆ ಒಂದು ಟೈಂಬಾಂಡ್ ಪ್ರೋಗ್ರಾಂ ಹಾಕಿ ಕಷ್ಟದಲ್ಲಿರುವ ರೈತರಿಗೆ ಸೌಲಭ್ಯ ಸಿಕ್ಕುವ ಏರ್ಪಾಡು ಮಾಡುತ್ತೀರಾ.

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಸದಸ್ಯರ ಸಲಹೆಯನ್ನು ಯೋಚನೆ ಮಾಡಿ ಅವರ ಕಳವಳಕ್ಕೆ ಅವಕಾಶವಾಗದ ಹಾಗೆ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಜಿ. ಬಿ. ಶಂಕರ್‌ರಾವ್,— ಟೆಕ್ನಿಕಲ್ ರಿಪೋರ್ಟ್ ಕೊಟ್ಟು ಮೂರು ನಾಲ್ಕು ವರ್ಷಗಳಾದರೂ ಸಹ ರೆವಿನ್ಯೂ ಇಲಾಖೆಯ ಅಧಿಕಾರಿಗಳು ಫೇಲ್ಡ್ ವೆಲ್ ಎಂದು ಹೇಳಿಲ್ಲ ಬಾವಿಗಳನ್ನು ತೋಡಿಸಿದ್ದರೂ ಸಹ ದಡಗಳು ಬಿದ್ದು, ಅವರು ಬಾವಿಗಳನ್ನು ತೆಗೆಯಿಸಿದ್ದಾರೋ ಏನೋ ಏನ್ನುವುದೇ ಗೊತ್ತಾಗುತ್ತಿಲ್ಲ. ಆದ್ದರಿಂದ ಇವರ ವಿಚಾರವನ್ನು ಪುನಃ ಪರಿಶೀಲನೆ ಮಾಡಿ, ಇವರಿಗೆ ಪ್ರೋತ್ಸಾಹ ಕೊಡಲಿಕ್ಕೆ ತಯಾರಿದ್ದೀರಾ ?

ಶ್ರೀ ಬಿ ಬಸವಲಿಂಗಪ್ಪ.—ಮಾನ್ಯ ಸದಸ್ಯರು ನಿರ್ದಿಷ್ಟವಾದ ನಿದರ್ಶನಗಳನ್ನು ನಮ್ಮ ಗಮನಕ್ಕೆ ತಂದರೆ ಇದರ ಬಗ್ಗೆ ನಾವು ಸೂಕ್ತ ಕ್ರಮ ತೆಗೆದುಕೊಳ್ಳುತ್ತೇವೆ. ಅದು ಬಿಟ್ಟು ಮಾನ್ಯ ಸದಸ್ಯರು ರಾಜ್ಯಕ್ಕೆ ಅನ್ವಯಿಸುವ ಮಾತುಗಳನ್ನು ಆಡಿದರೆ ನಾವು ಏನುಮಾಡುವುದು.

ಶ್ರೀ ಜಿ. ಬಿ. ಶಂಕರರಾವ್.—ಹಿರೇಕೆರೂರು ತಾಲ್ಲೂಕನಲ್ಲಿ ಭೂ ಅಭಿವೃದ್ಧಿ ಬ್ಯಾಂಕ್‌ನಿಂದ ಸುಮಾರು ೩೦ ಬಾವಿಗಳಿಗೆ ಸಾಲವನ್ನು ತೆಗೆದುಕೊಂಡು ಬಾವಿಗಳಲ್ಲಿ ನೀರು ಬಾರದೆ ವಿಫಲ ಗೊಂಡಿದ್ದರೂ ಸಹ ಸರ್ಕಾರದವರು ಸಾಲವನ್ನು ವಸೂಲು ಮಾಡುತ್ತಿದ್ದಾರೆ. ಇದರಿಂದ ರೈತರಿಗೆ ಬಹಳ ತೊಂದರೆಯಾಗಿದೆ ಇದನ್ನು ತಾವು ಪರಿಶೀಲನೆ ಮಾಡಿ ಜಿಲ್ಲಾಧಿಕಾರಿಗಳಿಗೆ ಆದೇಶಕೊಡುತ್ತೀರಾ? ಇದನ್ನೆಲ್ಲಾ ಪರಿಶೀಲನೆ ಮಾಡಿ, ಇವರಿಗೆ ಪ್ರೋತ್ಸಾಹ ಕೊಡಬೇಕು ಎಂದು ನಾನು ಹೇಳುತ್ತೇನೆ.

ಶ್ರೀ ಬಿ. ಬಸವಲಿಂಗಪ್ಪ.— ಮಾನ್ಯ ಸದಸ್ಯರು ಈ ನಿದರ್ಶನಗಳನ್ನು ಈಗತಾನೆ ನಮ್ಮ ಗಮನಕ್ಕೆ ತಂದಿದ್ದಾರೆ, ಸೂಕ್ತ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಕೆ. ವೆಂಕಟರಾಮಯ್ಯ.—ಅರ್ಧಂಬರ್ಧ ಬಾವಿಯನ್ನು ತೆಗೆದು ನೀರು ಬೀಳಲಿಲ್ಲ ಎಂದು ಹಣವನ್ನು ತೆಗೆದುಕೊಂಡು ಅದನ್ನು ತನ್ನ ಮಗಳ ಮದುವೆಗೋ ಮಗನ ಮದುವೆಗೋ ಉಪಯೋಗಿಸಿಕೊಂಡರೆ ಆ ಸಾಲವನ್ನು ಮನ್ನಾ ಮಾಡಬೇಕು ಎಂದರೆ ಅವರಿಗೂ ಮನ್ನಾ ಮಾಡುತ್ತೀರಾ?

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಸದಸ್ಯರು ಹೇಳತಕ್ಕಸಲಹೆಯನ್ನು ನಾವು ಗಮನದಲ್ಲಿಟ್ಟುಕೊಂಡು ಏನು ಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳುತ್ತೇವೆ. ಮಾನ್ಯ ಸದಸ್ಯರು ಹೇಳತಕ್ಕ ಕೆಟಗರಿಯಲ್ಲಿ ಈ ಕೇಸುಗಳು ಬರುತ್ತವೆಯೇ ಏನೋ ಗೊತ್ತಿಲ್ಲ.

ಶ್ರೀ ರಾಜೂಗೌಡ.—ತಜ್ಞರುಗಳು ಬಾವಿಗಳನ್ನು ಪರಿಶೀಲನೆ ಮಾಡಿ ವಿಫಲಗೊಂಡಿದೆ ಎಂದು ರಿಪೋರ್ಟನ್ನು ಕೊಟ್ಟ ಮೇಲೆ, ಅದನ್ನು ರೆವಿನ್ಯೂ ಅಧಿಕಾರಿಗಳಿಗೆ ಕಳುಹಿಸಬೇಕಾದ ಅವಶ್ಯಕತೆ ಏನು?

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಸದಸ್ಯರ ಪ್ರಶ್ನೆ ನನಗರ್ಥವಾಗುತ್ತಿಲ್ಲ. ರೆವಿನೂ ಅಧಿಕಾರಿಗಳೇ ಇದನ್ನು ಮನ್ನಾ ಮಾಡತಕ್ಕದ್ದು.

ಶ್ರೀ ರಾಜೂಗೌಡ.—ತಜ್ಞರುಗಳು ಪರಿಶೀಲನೆಮಾಡಿ ಇಂಥ ಬಾವಿ ಪೂರ್ಣ ವಿಫಲಗೊಂಡಿದೆ ಎನ್ನುವ ವರದಿಯನ್ನು ಕೊಟ್ಟಮೇಲೂ ರೆವಿನ್ಯೂ ಅಧಿಕಾರಿಗಳು ಮತ್ತೆ ಹೋಗಿ ಪರಿಶೀಲನೆ ಮಾಡತಕ್ಕ ಅವಶ್ಯಕತೆ ಏನು ಇದೆ?

ಶ್ರೀ ಬಿ. ಬಸವಲಿಂಗಪ್ಪ.—ಅವರ ಸಾಲವನ್ನು ಮನ್ನಾ ಮಾಡಬೇಕಾದರೆ, ರೆವಿನ್ಯೂ ಅಧಿಕಾರಿಗಳು ಇದರ ಬಗ್ಗೆ ಶಿಫಾರಸ್ ಮಾಡಬೇಕಾಗುತ್ತದೆ. ಇವರು ಕಡ್ಡಾಯವಾಗಿ ಇನ್ಸ್‌ಪೆಕ್ಟಮಾಡಬೇಕು ಎಂದೇನೂ ಇಲ್ಲ. ಹೋದರೆ ತಪ್ಪು ಏನು ಇದೆ.

Non-posting of a Lady Doctor at Combined Dispensary Harapanahalli

1096. SRI D. NARAYANADAS (Harapanahalli) Will the Minister for Health and Family Welfare be pleased to state.—

(*a*) whether it has come to the notice of the Government that there is no Lady Doctor in the Combined Dispensary at Harapanahalli since the last 2 to 3 years ;

(*b* if so, the reasons for the same ;

(*c*) when the Lady Doctor would be appointed?

SRI M. MALLAPPA (Minister for Health and Family Welfare).—

(*a*) Yes.

(*b*) Paucity of Lady Doctors.

(*c*) Appointment will be made soon after the receipt of a list of candidates selected by the P.S.C. or from the list of local candidates.

ಶ್ರೀ ಡಿ. ನಾರಾಯಣದಾಸ್.—ನನ್ನ ಪ್ರಶ್ನೆಗೆ ಉತ್ತರವಾಗಿ ತಾವು ಮಹಿಳಾ ವೈದ್ಯರು ಸಿಕ್ಕುವುದು ಅಭಾವ ಇದೆ ಎಂದು ಹೇಳಿದ್ದೀರಿ. ಎರಡು ವರ್ಷದ ಕೆಳಗೆ ಒಬ್ಬರನ್ನು ನಮ್ಮ ಆಸ್ಪತ್ರೆಗೆ ಪೋಸ್ಟ ಮಾಡಿದ್ದು ಆವರು ಬರಲಿಲ್ಲ. ಸಾಮಾನ್ಯವಾಗಿ ತಾಲ್ಲೂಕುಮಟ್ಟದ ಆಸ್ಪತ್ರೆಗಳಿಗೆ ಮಹಿಳಾ ವೈದ್ಯರನ್ನು ಪೋಸ್ಟ್‌ಮಾಡಿದರೆ ಅವರು ಬರುವುದೇ ಇಲ್ಲ. ಅಂಥವರ ಮೇಲೆ ತಾವು ಏನು ಕ್ರಮ ತೆಗೆದುಕೊಂಡಿದ್ದೀರಿ ಎನ್ನುವುದನ್ನು ಹೇಳಬೇಕು?